For More Job News Visit : www.kscvaani.com

ಕೇ0ದ್ರ ಕಛೇರಿ : ಪೋಸ್ಟ್ ಬಾಕ್ಸ್ ನ0. 21, ಸುಭಾಸ ರಸ್ತೆ, ಧಾರವಾಡ
THE KARNATAK CENTRAL CO-OPERATIVE BANK LTD., DHARWAD
HEAD OFFICE : P.B NO 21, SUBHAS ROAD, DHARWAD.
Ph:(0836)2443365/2444864 email:kccbdwd@gmail.com website:www.kccbankdharwad.in

ಕ್ರ: 1421 : ಆಡಳಿತ/ ನೇಮಕಾತಿ –2021–22 ದಿ: 27.01.2022

# –:ನೇಮಕಾತಿ ಪ್ರಕಟಣೆ:–

ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಧಾರವಾಡ ಇದರಲ್ಲಿ ಖಾಲಿ ಇರುವ 52 ಸಿಪಾಯಿ ಹುದ್ದೆಗಳನ್ನು ಮಾನ್ಯ ನಿಬಂಧಕರು, ಸಹಕಾರ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಆರ್‌ಸಿಎಸ್/ಸಿಆರ್ ಡಿ/ಕೆಎಂಇ–3/ 216/2020–21 ದಿನಾಂಕ:13.08.2021 ಮೇರೆಗೆ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಬೇಕಾದ ವಿಧಾನ, ಅರ್ಜಿ ನಮೂನೆ ಹಾಗೂ ಇನ್ನೀತರ ಮಾಹಿತಿಗಳನ್ನು ಬ್ಯಾಂಕಿನ ವೆಬ್‌ಸೈಟ್ www.kccbankdharwad.in ಮೂಲಕ ಪಡೆಯಬಹುದು. ನೇಮಕಾತಿ ಮಾಡಲು ಉದ್ದೇಶಿಸಿರುವ ಹುದ್ದೆಗಳನ್ನು ಕೆಳಗಿನಂತೆ ವರ್ಗೀಕರಿಸಿ ಮೀಸಲಿರಿಸಲಾಗಿದೆ.

**1.ಮೀಸಲಾತಿ ವಿವರ:**

| ಅ ನಂ | ಪ್ರವರ್ಗಗಳು | ಒಳ ಮೀಸಲಾತಿ | | | | | | ಒಟ್ಟು |
|---|---|---|---|---|---|---|---|---|
| | | ಸಾಮಾನ್ಯ | ಮಹಿಳಾ | ಗ್ರಾಮೀಣ | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಅಂಗ ವಿಕಲ | |
| 1. | ಸಾಮಾನ್ಯ | 8 | 7 | 7 | 1 | 2 | 1 | 26 |
| 2. | ಪರಿಶಿಷ್ಟ ಜಾತಿ | 1 | 3 | 2 | 1 | 0 | 0 | 7 |
| 3. | ಪರಿಶಿಷ್ಟ ಪಂಗಡ | 1 | 0 | 0 | 0 | 0 | 1 | 2 |
| 4. | ಪ್ರವರ್ಗ– 1 | 1 | 0 | 0 | 0 | 0 | 1 | 2 |
| 5. | ಪ್ರವರ್ಗ– 2 ಎ. | 1 | 3 | 2 | 1 | 0 | 1 | 8 |
| 6. | ಪ್ರವರ್ಗ– 2 ಬಿ. | 1 | 0 | 0 | 0 | 0 | 1 | 2 |
| 7. | ಪ್ರವರ್ಗ– 3 ಎ. | 1 | 0 | 0 | 0 | 0 | 1 | 2 |
| 8. | ಪ್ರವರ್ಗ– 3 ಬಿ. | 1 | 1 | 0 | 0 | 0 | 1 | 3 |
| | ಒಟ್ಟು | **15** | **14** | **11** | **3** | **2** | **7** | **52** |

**2.ವೇತನ ಶ್ರೇಣಿ:** ರೂ.12500–250–13000–300–14200–350–15600–400–17200–450–19000–500–21000–600–24000 ಮತ್ತು ನಿಯಮಾನುಸಾರ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ನೀಡಲಾಗುವುದು.

**3.ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.

**4.ವಯೋಮಿತಿ:** ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳು

| ವರ್ಗ | ಗರಿಷ್ಟ ವಯೋಮಿತಿ |
|---|---|
| ಸಾಮಾನ್ಯ ವರ್ಗಕ್ಕೆ | 35 ವರ್ಷಗಳು, |
| ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 | 40 ವರ್ಷಗಳು |
| ಇತರೆ ಹಿಂದುಳಿದ ವರ್ಗಗಳು | 38 ವರ್ಷಗಳು, |

ಹಾಗೂ ಆಯಾ ವರ್ಗಗಳಿಗೆ ನಿಗದಿತ ಗರಿಷ್ಟ ವಯೋಮಿತಿಗೆ ಅಂಗವಿಕಲರು ಮತ್ತು ವಿಧವೆಯರಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇರುತ್ತದೆ. ಮತ್ತು ಮಾಜಿ ಸೈನಿಕರಿಗೆ ಅವರು ಸೇನೆಯಲ್ಲಿ ಸಲ್ಲಿಸಿದ ಅವಧಿ ಅಥವಾ ಗರಿಷ್ಟ 10 ವರ್ಷಗಳು ಇದರಲ್ಲಿ ಯಾವುದು ಕಡಿಮೆ ಅಷ್ಟು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

For More Job News Visit : www.kscvaani.com



**5.ಆಯ್ಕೆ ವಿಧಾನ:**

ಅರ್ಹತಾ ಪರೀಕ್ಷೆಯಲ್ಲಿ(ಎಸ್.ಎಸ್.ಎಲ್.ಸಿ)ಪಡೆದ ಅಂಕಗಳನ್ನು ಪರಿಗಣಿಸಿ,ಅಂಕಗಳ ಶೇಕಡಾವರು ಮೆರಿಟ್ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು, ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ 85 ಕ್ಕಿಳಿಸಿ ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು , ಸದರಿ ಅಂಕಗಳನ್ನು ಒಟ್ಟು ಸೇರಿಸಿ ರ್ಯಾಂಕಿಂಗ್ ಆಧಾರದಲ್ಲಿ ಆಯ್ಕೆ ಮಾಡಲಾಗುವುದು.

**6. ಅರ್ಜಿ ಶುಲ್ಕ:**

1.ಸಾಮಾನ್ಯ ಅಭ್ಯರ್ಥಿಗಳು ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳು ರೂ.500/- ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ ಅಂಗವಿಕಲರು/ ಮಾಜಿ ಸೈನಿಕ/ವಿಧವಾ ಅಭ್ಯರ್ಥಿಗಳು ರೂ.250/- ಗಳನ್ನು ನಿಗದಿಪಡಿಸಲಾಗಿದೆ, ನಿಗದಿತ ಶುಲ್ಕವನ್ನು **"ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೆ.ಸಿ.ಸಿ. ಬ್ಯಾಂಕ ಲಿ., ಧಾರವಾಡ"**ಈ ಹೆಸರಿನಲ್ಲಿ ಕ್ರಾಸ ಮಾಡಿದ ಡಿಮ್ಯಾಂಡ್ ಡ್ರಾಫ್ಟ( ಡಿ.ಡಿ.) ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು

**7.ಅರ್ಜಿ ಸಲ್ಲಿಸುವ ವಿಧಾನ:**

1. ನಿಗದಿತ ಅರ್ಜಿ ನಮೂನೆಯನ್ನು ಬ್ಯಾಂಕಿನ ವೆಬ್ ಸೈಟ್ www.kccbankdharwad.in ನಿಂದ ಡೌನ ಲೋಡ ಮಾಡಿಕೊಳ್ಳುವದು,
2. ಭರ್ತಿ ಮಾಡಿದ ಅರ್ಜಿ, ದಾಖಲಾತಿಗಳು ಮತ್ತು ಡಿ.ಡಿ. ಯನ್ನು ಲಕೋಟೆಯಲ್ಲಿಟ್ಟು (ಮುಚ್ಚಿದ ಕವರ್) **"ಸಿಪಾಯಿ ಹುದ್ದೆಗೆ ಅರ್ಜಿ"** ಅಂತಾ ನಮೂದಿಸಿ **ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೆ.ಸಿ.ಸಿ ಬ್ಯಾಂಕ ಲಿ., ಪ್ರಧಾನ ಕಚೇರಿ, ಸುಭಾಸ ರೋಡ, ಧಾರವಾಡ -580001** ಇವರ ಕಚೇರಿಗೆ ಖುದ್ದಾಗಿ ಅಥವಾ ರಜಿಸ್ಟರ್ ಅಂಚೆ ಮೂಲಕ ಸಲ್ಲಿಸಬಹುದು.
3. **ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 29.01.2022 ರ ಬೆಳಿಗ್ಗೆ 11.00 ಗಂಟೆಯಿಂದ ಮತ್ತು ಕೊನೆಯ ದಿನಾಂಕ :19.02.2022 ರ ಸಂಜೆ :05.00 ಗಂಟೆ ವರೆಗೆ ಮಾತ್ರ**

**8. ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು: (ದಾಖಲಾತಿಗಳನ್ನು ಗೆಜೆಟೇಡ್ ಅಧಿಕಾರಿಯಿಂದ ದೃಢೀಕರಿಸಿ ಪ್ರತಿಯನ್ನು ಲಗತ್ತಿಸಬೇಕು)**

1) ಎಸ್.ಎಸ್.ಎಲ್.ಸಿ ಅಂಕ ಪಟ್ಟಿ.
2) ಸ್ವ ಹಸ್ತಾಕ್ಷರವಿರುವ ಇತ್ತೀಚಿನ 03 ಭಾವಚಿತ್ರಗಳು.
3) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗದ ಮತ್ತು ಗ್ರಾಮೀಣ ಅಭ್ಯರ್ಥಿ / ಕನ್ನಡ ಮಾಧ್ಯಮ / ಮಾಜಿ ಸೈನಿಕ ಅಭ್ಯರ್ಥಿ / ಅಂಗವಿಕಲ ಅಭ್ಯರ್ಥಿ ಮೀಸಲಾತಿ ಸೌಲಭ್ಯ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸರ್ಕಾರ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ದೃಢೀಕರಣ ಪಡೆದ ಚಾಲ್ತಿ ಇರುವ ಪ್ರಮಾಣ ಪತ್ರಗಳ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು ಮತ್ತು ಮೂಲ ಪ್ರತಿಗಳನ್ನು ಸಂದರ್ಶನ / ಪರಿಶೀಲನೆ ಕಾಲಕ್ಕೆ ಸಲ್ಲಿಸತಕ್ಕದ್ದು.
4) ಅಭ್ಯರ್ಥಿಗಳು ತಮ್ಮ ವಿಳಾಸ ಸಮರ್ಥಿಸಲು ಅಗತ್ಯ ದಾಖಲಾತಿ ಸಲ್ಲಿಸತಕ್ಕದ್ದು(ಆಧಾರ ಕಾರ್ಡ/ ವೋಟರ್ ಐಡಿ/ ಪ್ಯಾನ್ ಕಾರ್ಡ/ಡ್ರೈವಿಂಗ್ ಲೈಸೆನ್ಸ/ ಸರಕಾರದಿಂದ ಮಾನ್ಯತೆ ಪಡೆದ ಇನ್ನಿತರೆ ಯಾವುದೇ ದಾಖಲಾತಿ)

For More Job News Visit : www.kscvaani.com



9) ಇತರೆ ನಿಬಂಧನೆಗಳು:

1. ಅಪೂರ್ಣ ಮಾಹಿತಿಯ /ದಾಖಲಾತಿಗಳನ್ನು ಹಾಗೂ ನಿಗದಿತ ಶುಲ್ಕದ ಡಿ.ಡಿ. ಲಗತ್ತಿಸದೇ ಸಲ್ಲಿಸಿದ ಮತ್ತು ನಿಗದಿತ ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
2. ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿರುತ್ತದೆ.
3. ಅರ್ಹ ಅಭ್ಯರ್ಥಿಗಳು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.
4. ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಆಹ್ವಾನಿಸಲಾಗುವುದು, ಮತ್ತು ಅಭ್ಯರ್ಥಿಗಳು ಸಂದರ್ಶನಕ್ಕೆ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದು. ಯಾವುದೇ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆ ಬಂದಿಲ್ಲವೆಂದರೆ ಅರ್ಹತೆ ಹೊಂದಿಲ್ಲವೆಂದು ತಿಳಿಯತಕ್ಕದ್ದು, ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡುವದಿಲ್ಲ.
5. ಸಂದರ್ಶನಕ್ಕೆ ಕರೆಯೋಲೆ ಯಾವುದೇ ಕಾರಣಕ್ಕಾಗಿ ತಲುಪದಿದ್ದಲ್ಲಿ ಬ್ಯಾಂಕಿನ ಜವಾಬ್ದಾರಿ ಇರುವದಿಲ್ಲ.
6. ಖೊಟ್ಟಿ ಮಾಹಿತಿ/ದಾಖಲಾತಿಗಳ ಸಲ್ಲಿಕೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ.
7. ಆಯ್ಕೆಯಾದ ಅಭ್ಯರ್ಥಿಗಳು 1 ವರ್ಷದ ಅವಧಿಯ ಪರೀಕ್ಷಾರ್ಹ(ಪ್ರೋಬೇಶನರಿ)ಸೇವೆಯಲ್ಲಿ ಇರಬೇಕಾಗುವದು ಮತ್ತು ಬ್ಯಾಂಕು ಸೂಚಿಸಲ್ಪಟ್ಟಂತ ಭದ್ರತೆಯೊಂದಿಗೆ ಮತ್ತು ಇಂಡಿಮಿನಿಟಿ ಬಾಂಡ ಬರೆದುಕೊಡಬೇಕು ಮತ್ತು ನಿಯೋಜಿಸಿದ ಶಾಖೆಯಲ್ಲಿ ಕಾರ್ಯನಿರ್ವಹಿಸಬೇಕು.
8. ಒಳ ಮೀಸಲಾತಿಯ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.
9. ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ನಿಯಮಾನುಸಾರ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ನಿಯಮಗಳಿಗೊಳಪಟ್ಟು ಕಾರ್ಯನಿರ್ವಹಿಸಬೇಕಾಗಿರುತ್ತದೆ.
10. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಬೆಳಿಗ್ಗೆ.10.30 ರಿಂದ 5.30 ರ ವರೆಗೆ ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆ : 0836-2443365

ಸದಸ್ಯ ಕಾರ್ಯದರ್ಶಿ
ನೇಮಕಾತಿ ಸಮಿತಿ ಹಾಗೂ
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು
ಕೆ.ಸಿ.ಸಿ. ಬ್ಯಾಂಕ್ ಲಿ. ಧಾರವಾಡ

For More Job News Visit : www.kscvaani.com

ಕೇ0ದ್ರ ಕಛೇರಿ : ಪೋಸ್ಟ್ ಬಾಕ್ಸ್ ನ0. 21, ಸುಭಾಸ ರಸ್ತೆ, ಧಾರವಾಡ.
THE KARNATAK CENTRAL CO-OPERATIVE BANK LTD., DHARWAD.
HEAD OFFICE : P.B NO 21, SUBHAS ROAD, DHARWAD.
Ph:(0836)2443365 email.kccbdwd@gmail.com website:www.kccbankdharwad.in

# "ಸಿಪಾಯಿ ಹುದ್ದೆಗೆ ಅರ್ಜಿ"

ಸದಸ್ಯ ಕಾರ್ಯದರ್ಶಿ,
ಸಿಬ್ಬಂದಿ ನೇಮಕಾತಿ ಸಮೀತಿ ಹಾಗೂ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಕೆ.ಸಿ.ಸಿ. ಬ್ಯಾಂಕ ಲಿ, ಧಾರವಾಡ ಇವರಿಗೆ,

ಸ್ವ ಹಸ್ತಾಕ್ಷರದ ಇತ್ತೀಚಿನ ಭಾವಚಿತ್ರ ಲಗತ್ತಿಸುವದು

ಮಾನ್ಯರೇ,

ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಧಾರವಾಡ ಇದರಲ್ಲಿ ಸಿಪಾಯಿ ಹುದ್ದೆಯ ನೇಮಕಾತಿ ಕುರಿತು ಪ್ರಕಟಿಸಿದ ಜಾಹೀರಾತಿನ ಸಂಖ್ಯೆ: 1421/ಆಡಳಿತ/ ನೇಮಕಾತಿ /2021-22 ದಿನಾಂಕ: 27-01-2022 ರನ್ವಯ ನಾನು ಸಿಪಾಯಿ ಹುದ್ದೆಯ ಅರ್ಜಿಯನ್ನು ಈ ಕೆಳಗಿನ ಮಾಹಿತಿಯೊಂದಿಗೆ ಸಲ್ಲಿಸಿರುತ್ತೇನೆ.

| | | |
|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | |
| 2 | ತಂದೆ /ತಾಯಿ/ ಗಂಡನ ಹೆಸರು<br>ತಂದೆ ಜೀವಂತವಿಲ್ಲದಿದ್ದಲ್ಲಿ ಪೋಷಕರ ಹೆಸರು ಮತ್ತು ಸಂಬಂಧ | |
| 3 | ಅಂಚೆ ವಿಳಾಸ | |
| 4 | ಖಾಯಂ ಮನೆಯ ವಿಳಾಸ | |
| 5 | ಮೊಬೈಲ್ ಸಂಖ್ಯೆ /ಈ ಮೇಲ್: | |
| 6 | ಜನ್ಮಸ್ಥಳ /ತಾಲೂಕು /ಜಿಲ್ಲಾ /ರಾಜ್ಯ | |
| 7 | ಜನ್ಮ ದಿನಾಂಕ<br>(ಎಸ್.ಎಸ್.ಎಲ್.ಸಿ ಮಾರ್ಕ್ಸ್ ಕಾರ್ಡ / ವರ್ಗಾವಣೆ ಪ್ರಮಾಣ ಪತ್ರ ವಯಸ್ಸಿನ ದಾಖಲೆ ಸಲುವಾಗಿ ಲಗತ್ತಿಸಬೇಕು) | ವಯಸ್ಸು ದಿ: 19-02-2022 ಕ್ಕೆ ಇದ್ದಂತೆ |
| 8 | ಲಿಂಗ (ಸ್ತ್ರೀ / ಪುರುಷ) | |
| 9 | ಧರ್ಮ, ಜಾತಿ : | |
| 10 | ರಾಷ್ಟ್ರೀಯತೆ : | |

For More Job News Visit : www.kscvaani.com



**11** ನೀವು ಈ ಕೆಳಕಂಡ ಯಾವ ವರ್ಗಕ್ಕೆ ಸೇರಿರುತ್ತೀರಿ ( ✓ ಗುರುತಿಸಿ)

| ಸಾಮಾನ್ಯ | ಪ ಜಾತಿ | ಪ ಪಂಗಡ | ಪ್ರ ವರ್ಗ-1 | ಪ್ರ ವರ್ಗ-2ಎ | ಪ್ರ ವರ್ಗ-2ಬಿ | ಪ್ರ ವರ್ಗ-3ಎ | ಪ್ರ ವರ್ಗ-3ಬಿ |
|---|---|---|---|---|---|---|---|
| | | | | | | | |

ಒಳಮೀಸಲಾತಿ:

| ಸಾಮಾನ್ಯ | ಮಹಿಳಾ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಅಂಗವಿಕಲ |
|---|---|---|---|---|---|
| | | | | | |

**12** ವಯೋಮಿತಿ ಸಡಿಲಿಕೆಗೆ ಅರ್ಹರಿದ್ದಲ್ಲಿ ಮಾಹಿತಿ ( ✓ ಗುರುತಿಸಿ)

| ಮಾಜಿ ಸೈನಿಕ (ಸೇನೆಯಲ್ಲಿ ಸಲ್ಲಿಸಿದ ಸೇವಾ ಅವಧಿ ನಮೂದಿಸುವುದು) | ಅಂಗವಿಕಲ | ವಿಧವಾ |
|---|---|---|
| | | |

**13**

| ವಿದ್ಯಾರ್ಹತೆ | ಪರೀಕ್ಷಾ ಮಂಡಳಿ ಹೆಸರು | ಪಾಸಾದ ವರ್ಷ | ಒಟ್ಟು ಅಂಕಗಳು | ಪಡೆದ ಅಂಕಗಳು | ಶೇಕಡಾ |
|---|---|---|---|---|---|
| ಎಸ್.ಎಸ್.ಎಲ್.ಸಿ | | | | | |

**14** ಸೇವಾ ಅನುಭವ/ ಇತರೆ ಪೂರಕ ಮಾಹಿತಿಗಳ ಸಂಕ್ಷಿಪ್ತ ವಿವರ:

**15** ಹಣ ಪಾವತಿಯ ವಿವರ

ಬ್ಯಾಂಕ ಹೆಸರು:

ಡಿ.ಡಿ.ನಂ:

ದಿನಾಂಕ: ಮೊತ್ತ:

**16** ಅರ್ಜಿ ಜೊತೆಗೆ ಲಗತ್ತಿಸಿದ ದಾಖಲಾತಿಗಳ ವಿವರ:

1. 2.
3. 4.
5. 6.

## ಅಭ್ಯರ್ಥಿಯ ಘೋಷಣೆ:

ಈ ಮೇಲಿನ ಮಾಹಿತಿಗಳು ಸತ್ಯವಾಗಿ ಹಾಗೂ ಕರಾರುವಕ್ಕಾಗಿ ಇರುವದೆಂದು ಪ್ರಮಾಣ ಪೂರ್ವಕವಾಗಿ ದೃಡೀಕರಿಸುತ್ತೇನೆ.

ಸ್ಥಳ :

ದಿನಾಂಕ :

ಅಭ್ಯರ್ಥಿಯ ಸಹಿ